<?xml version="1.0" ?>
<?xml-stylesheet type="text/css" href="home.css"?>

<Doc id="kan-w-media- KA00006(a) " lang="Kannada">
<Header type="text">
<encodingDesc>
<projectDesc> CIIL-Kannada Corpora, Monolingual Written Text </projectDesc>
<samplingDesc> Simple written text only has been transcribed. Diagrams, pictures, tables and verses have been omitted. Samples taken from page 28-29, 64-65, 94-95,122-123, 150-151, 186-187, 208-209, 232-233, 262-263, 302-303 </samplingDesc>
</encodingDesc>
<sourceDesc>
<biblStruct>
<source> SRLC
<category> Aesthetics </category>
<subcategory> Literature-Novels </subcategory>
<text> Book </text>
<title> omarTA </title>
<vol> </vol>
<issue> </issue>
</source>
<textDes>
<type> </type>
<headline> omarTA </headline>
<author>ravi beLagere</author>
<words> 1893 </words>
</textDes>
<imprint>
<pubPlace> Bangalore -India </pubPlace>
<publisher> bhavana prakAshana </publisher>
<pubDate> 1999 </pubDate>
</imprint>
<idno type="CIIL code"> S55530 </idno>
<index> KA00006(a) </index>
</biblStruct>
</sourceDesc>

<profileDesc>
<creation>
<date> 25-Aug-2006 </date>
<inputter> R.Sevanthi </inputter>
<proof> Vijayalaxmi Patil </proof>
</creation>
<langUsage> Kannada </langUsage>
<wsdUsage>
<writingSystem id="ISO/IEC 10646">Universal Multiple-Octet Coded Character Set (UCS).
</writingSystem>
</wsdUsage>
<textClass>
<channel mode="w"> print </channel>
<domain type="public"> </domain>
</textClass>
</profileDesc>
</Header>
<text><body>

<p> ‘ಇನ್ನೇನು ಬರುವ ಹೊತ್ತು....’ ಆರುಗಂಟೆ ಹದಿನೈದು ನಿಮಿಷಗಳ ಬಳಿ ಕದಲುತ್ತಿದ್ದ ಗಡಿಯಾರದ ಮುಳ್ಳನ್ನು ನೋಡಿಕೊಂಡು, ತನಗೆ ತಾನೇ ಎಂಬಂತೆ ಹೇಳಿಕೊಂಡಿದ್ದಳು ಶರ್ಮಿಳಾ. ಅದೇಕೋ ಅವಳಿಗೆ ಇದ್ದಕ್ಕಿದಂತೆ ಸೀನಂಕಲ್‌ನ ಮೊನಚುಗಣ್ಣು ನೆನಪಾಗಿ ಮೈಮೇಲೆಲ್ಲ ಜಿರಳೆ ಸರಿದಾಡಿದಷ್ಟು ಅಸಹ್ಯವಾಯಿತು. ಕಣ್ಣುಗಳಷ್ಟೇ ಅಲ್ಲ; ಸೀನಂಕಲ್‌ನ ವ್ಯಕ್ತಿತ್ವವೇ ಅಂತಹುದು. ಅದು ಅಸಹ್ಯ ಹುಟ್ಟಿಸುತ್ತದೆ. ಆ ಮನುಷ್ಯ ಎದುರಿಗೆ ಬಂದರೆ ಸಾಕು; ಯಾವಾಗ ತೆವಳಿಕೊಂಡು ಬಂದು ಮೈಮೇಲೆ ಬೀಳುತ್ತಾನೋ ಎನಿಸುತ್ತಿತ್ತು. ಬೇಟೆಯಾಡಲು ಕೈಲಾಗದ ನಿಕೃಷ್ಟ ಪ್ರಾಣಿಯೊಂದು ತನ್ನ ಆಸೆಬುರುಕ ಕಣ್ಣುಗಳನ್ನು ಇನ್ನು ಸ್ವಲ್ಪ ಹೊತ್ತಿನಲ್ಲೇ ಸಾಯಲಿರುವ ರೋಗಿಷ್ಟ ಪ್ರಾಣಿಯೊಂದರ ಮೇಲೆ ಕೀಲಿಸಿ ಕುಳಿತ ಚಿತ್ರವನ್ನು ಯಾವನಾದರೂ ಕಲಾವಿದ ಚಿತ್ರಿಸಿ ಕೊಟ್ಟರೆ, ಅದು ಥೇಟು ಸೀನಂಕಲ್ ಥರಾನೇ ಇರುತ್ತದೆನಿಸುತ್ತಿತ್ತು. </p>

<p> ಪುಟ್ಟ ಪುಟ್ಟ ನೆರಿಗೆಗಳ ಮರೂನ್ ಬಣ್ಣದ ಸ್ಕರ್ಟು ಹಾಕಿಕೊಂಡು ಚೆಂಡಿನಂತೆ ಪುಟಿಯುತ್ತಿದ್ದ ತನ್ನನ್ನು ಅದ್ಯಾವ ಮಾಯದಲ್ಲೋ ಸಮೀಪಿಸಿ ಗಬಕ್ಕನೆ ಅವುಚಿಕೊಂಡು ಅತ್ಯಂತ ಅಸಹ್ಯಕರವಾಗಿ ನಾರುವ ಬಾಯಿಂದ ತನ್ನ ಕೆನ್ನೆಗಳಿಗೆ ಸೀನಂಕಲ್ ಮುತ್ತು ಕೊಟ್ಟು ಬಿಡುತ್ತಿದ್ದನಲ್ಲ? ಆವಾಗ ತಾನು ಓದುತ್ತಿದ್ದುದು ಎಂಟನೇ ಕ್ಲಾಸು. ಹಾಗಂತ ನೆನಪು ಮಾಡಿಕೊಂಡಳು ಶರ್ಮಿಳಾ. </p>

<p> ಅನುದ್ದೇಶಿತವಾಗಿಯೇ ಎಂಬಂತೆ ತನ್ನ ಎಳೆಯ ಎದೆಗಳ ಮೇಲೆ ಸೀನಂಕಲ್ ಕೈಯ್ಯಾಡಿಸಿದಾಗ ತನಗೆಷ್ಟು? ಹೆಚ್ಚೆಂದರೆ ಹದಿನಾರು ವರ್ಷ! ನಿದ್ರೆಯ ಮರೆವಿನಲ್ಲಿ ಸರಿದು ಹೋದ ದಾವಣಿ ತನ್ನ ಎದೆ, ತೋಳು, ಭುಜಗಳನ್ನೆಲ್ಲ ಅನಾವರಣಗೊಳಿಸಿದೆಯೆಂಬುದು ಫಕ್ಕನೆ ಗೊತ್ತಾಗಿ, ಅವಳು ದಿಡಗ್ಗನೆ ಎದ್ದುಕುಳಿತು ಹೊದಿಕೆಗಾಗಿ ಪರದಾಡುತ್ತಿದ್ದರೆ; ಸೀನಂಕಲ್ ತನ್ನ ಕೋಣೆಯ ಬಾಗಿಲಲ್ಲಿ ನಿಂತು ಹಸಿದ ಚಿರತೆಯಂತೆ ತನ್ನನ್ನೇ ನೋಡುತ್ತ ನಿಂತಿರುತ್ತಿದ್ದಾಗ ಆಗ ಶರ್ಮಿಳಾ ಓದುತ್ತಿದ್ದುದು ಮೊದಲ ಬಿ.ಎಸ್ಸಿ. ಹಾಗೆ ಚಿಕ್ಕಂದಿನಿಂದಲೂ ತನ್ನ ಆಸೆಬುರುಕ ಕಣ್ಣುಗಳಿಂದ ಶರ್ಮಿಳೆಯ ಬಾಲ್ಯ ಮತ್ತು ಯೌವ್ವನಗಳೆರಡನ್ನೂ ಬೇಟೆಯಾಡಿದ ಸೀನಂಕಲ್, ಇಷ್ಟಕ್ಕೂ ತನಗೇನಾಗಬೇಕು? ಮೊಟ್ಟ ಮೊದಲ ಬಾರಿಗೆ ಅಮ್ಮನನ್ನು ಕೇಳಿದಾಗ, </p>

<p> ಆದರೆ ನೀಲಸಂದ್ರದ ಮನೆಯೊಳಕ್ಕೆ ಜೀವಾ ಕಾಲಿಡುವ ಹೊತ್ತಿಗೆ ಡಾನ್ ವಾಜಪ್ಪ ಜ್ವಾಲಾಮುಖಿಯಂತೆ ಸ್ಫೋಟಿಸಲು ಸಿದ್ಧನಾಗಿ ಬಿಟ್ಟಿದ್ದ. ಅವನು ತನ್ನ ಮರದ ಕಾಂಡದಂತಹ ಕುರ್ಚಿಯಲ್ಲಿ ಕುಳಿತಿರಲಿಲ್ಲ. ವಿಶಾಲವಾದ ಆ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದ. ಒಳಮನಸ್ಸು ಸಿಟ್ಟಿನಿಂದಾಗಿ ದಹಿಸಿ ಹೋಗುತ್ತಿತ್ತು. </p>

<p> ನಿಜಕ್ಕೂ ಅದೆಲ್ಲ ಬೇಕಿರಲಿಲ್ಲ. ಒಂದೇ ಒಂದು ಇರಿತ ಸಾಕಿತ್ತು. ಕಠಾರಿ ನಾಗ ಭೂಗತ ಲೋಕದ ಮಟ್ಟಿಗೆ ಸಣ್ಣ ಕ್ರಿಮಿಯೇನಲ್ಲ. ಗೇಬ್ರಿ ಚಂದ್ರಪ್ಪನಷ್ಟೇ ಕುಖ್ಯಾತಿಯಿತ್ತು. ಅವನನ್ನು ಕೊಲ್ಲುವ ಮೂಲಕ ಗೇಬ್ರಿಗೆ ತನ್ನ ಸಂದೇಶ ತಲುಪಿದರೆ ಸಾಕಿತ್ತು. ಭೂಗತ ಭಾಷೆ ಅರ್ಥ ಮಾಡಿಕೊಳ್ಳುವುದು ಗೇಬ್ರಿಗೆ ಕಷ್ಟವಲ್ಲ. ಅದಕ್ಕಾಗಿ ಅಷ್ಟೊಂದು ನಿರ್ದಯತೆ ಬೇಕಾಗಿರಲಿಲ್ಲ. ಆದರೆ ಗಮಾರ ಜೀವಾ ತುಂಬಿದ ರೈಲ್ವೆ ಸ್ಟೇಷನ್ನಿನಲ್ಲಿ ರಾಕ್ಷಸನಂತಾಡಿ ಬಿಟ್ಟಿದ್ದ. ಆಕಸ್ಮಾತ್ ಸಿಕ್ಕಿಬಿದ್ದಿದ್ದರೆ? ವಾಜಪ್ಪ ಕೋಪದಿಂದ ಕುದಿಯುತ್ತಿದ್ದ. ಆದರೆ ಜೀವಾ! ಅವನ ದೇಹ ಸೂಸುವ ತಾಕತ್ತು ಮತ್ತು ಕ್ರೌರ್ಯಗಳ ಬಗ್ಗೆ ವಾಜಪ್ಪನಿಗೆ ಮೊದಲ ದಿನವೇ ಅಂದಾಜು ಸಿಕ್ಕಿ ಹೋಗಿತ್ತು. ಅವತ್ತು ಜೀವಾ ಲಾಕಪ್ಪಿನಲ್ಲಿ ಗಾಯಗೊಂಡ ಹೆಬ್ಬುಲಿಯಂತೆ ಹೊರಳುತ್ತಿದ್ದ. ಐದು ಜನ ಬಲಿಷ್ಟ ಪೇದೆಗಳು ಅವನ ಸುತ್ತ ನಿಂತುಕೊಂಡು ಪಶುವಿಗೆ ಬಡಿದಂತೆ ಬಡಿಯುತ್ತಿದ್ದರು. ಒಂದಾದ ಮೇಲೊಂದರಂತೆ ದೊಣ್ಣೆಗಳು ಮುರಿದು ಹೋಗುತ್ತಿದ್ದವು. ಭೂಗತ ಜಗತ್ತಿನಲ್ಲೂ ಇದ್ದಾರೆ; ಹೀಗೆ ಪೊಲೀಸರ 'ವರ್ಕು' ತಡೆಯಬಲ್ಲ ನಾರು ದೇಹದ ನಿಸ್ಸೀಮರು. ಕೆಲವರಿಗಂತೂ ಪೊಲೀಸರ ಲಾಠಿ ಅಭ್ಯಾಸವೇ ಆಗಿ ಹೋಗಿದೆ. ಆದರೆ ಉಹುಂ; ಅವರ್ಯಾರೂ ಇವನಂತೆ ಒಂದೇ ಒಂದು ಆರ್ತನಾದವಿಲ್ಲದೆ ಲಾಠಿಗೆ ಬೆನ್ನು ಕೊಡುವಷ್ಟು ಮೊಂಡರಲ್ಲ. </p>

<p> "ಏನು ಇವನೆಸ್ರು?" ಲಾಕಪ್ಪನ ಬಾಗಿಲಲ್ಲಿ ನಿಂತೇ ಕೇಳಿದ್ದ ವಾಜಪ್ಪ. ಪೊಲೀಸು ಪೇದೆಯೊಬ್ಬನನ್ನು ರೈಲ್ವೆ ಸ್ಟೇಶನ್ನಿನ ಬ್ರಿಡ್ಜಿನ ಮೆಟ್ಟಿಲಿನಲ್ಲಿ ಯಾವನೋ ಉರುಳುರುಳಿಸಿ ಬಡಿದಿದ್ದನಂತೆ. ಇಪ್ಪತ್ತು ಜನ ಆಫೀಸರುಗಳು ಹೋಗಿ ಕಷ್ಟಪಟ್ಟು ಹಿಡಿದು ತಂದಿದ್ದಾರಂತೆ. ಅವನನ್ನು ನೋಡಲೆಂದೇ ಇಡೀ ಮೆಜೆಸ್ಟಿಕ್ಕು ಗುಮಿಗೂಡಿದೆಯಂತೆ-ಎಂಬ ಸುದ್ದಿ ಕೇಳಿಯೇ ವಾಜಪ್ಪ ಅವತ್ತು ಉಪ್ಪಾರ ಪೇಟೆ ಪೊಲೀಸ್ ಠಾಣೆಗೆ ಖುದ್ದಾಗಿ ಹೋಗಿದ್ದ. ಕೇಳಿದ್ದು ಸುಳ್ಳಾಗಿರಲಿಲ್ಲ. ನಿರಂತರವಾಗಿ ಬೀಳುತ್ತಿದ್ದ ಹೊಡೆತಗಳಿಗೆ ದೇಹ ಕದಲುತ್ತಿತ್ತೇ ಹೊರತು, ಬಾಯಿಂದ 'ಅಮ್ಮಾ' ಎಂಬ ಆರ್ತನಾದ ಮಾತ್ರ ಹೊರಡುತ್ತಿರಲಿಲ್ಲ. ಒಂದೊಂದು ಏಟು ಬಿದ್ದಾಗಲೂ ಅವನು ಗಾಯಗೊಂಡ ಮೃಗದಂತೆ ತನ್ನನ್ನು ಹೊಡೆಯುತ್ತಿದ್ದ ಪೊಲೀಸರ ಮುಖಗಳನ್ನೇ ದಿಟ್ಟಿಸಿ ನೋಡುತ್ತಿದ್ದ. </p>

<p> ದಂತ ಕಥೆಗಳನ್ನು ಅವನೂ ಕೇಳಿಸಿಕೊಳ್ಳುತ್ತಿದ್ದ. ರಕ್ತದಾಹಿಗಳ ಲೋಕಕ್ಕೆ ದಂತಕತೆಗಳು ಹೊಸವಲ್ಲ. ಒಂದೇ ಒಂದು ಕೊಲೆ ಮಾಡಿಬಿಟ್ಟರೆ ಮುಗಿಯಿತು: ಮಾರನೆಯ ದಿನವೇ ಭೂಗತ ಜಗತ್ತು ಕೊಂದವನನ್ನು ಕಣ್ಣಲ್ಲಿಟ್ಟುಕೊಂಡು ಪೂಜಿಸುತ್ತದೆ. ಹತ್ತಿರ ಬಂದರೆ ಎದ್ದು ನಿಂತು ಗೌರವಿಸುತ್ತದೆ. ಕೈಚಾಚದಿದ್ದರೂ ಕಂತೆ ಕಂತೆ ತಂದು ಮುಂದಿಡುತ್ತದೆ. ಅದೆಲ್ಲ ಎಷ್ಟು ದಿನ? ಕೊಂದವನ ಬೆನ್ನಲ್ಲೇ ಮತ್ತೊಬ್ಬ ಮಚ್ಚು ಮಸೆಯುತ್ತಿದ್ದಾನೆ ಮಚ್ಚು ಬೀಸುವ ತನಕ ದಂತ ಕಥೆಗಳು ಚಾಲ್ತಿಯಲ್ಲಿದ್ದೇ ಇರುತ್ತವೆ. ಈಗ ಜೀವಾ ಎಂಬ ಆಗಂತುಕನ ಬಗ್ಗೆ ಇದ್ದಂತೆ. </p>

<p> ಚಂದ್ರಪ್ಪ ತನ್ನ ಕೋಣೆಯಲ್ಲಿ ಕುಳಿತು ಅದನ್ನೇ ಯೋಚಿಸುತ್ತಿದ್ದ. ಕಠಾರಿ ನಾಗನಂತಹ ಧೃಡದೇಹಿಯನ್ನೇ ಹಿಡಿದು ಮುರಿದು ಹಾಕಿದನೆಂದರೆ, ಅವನು ಬಲಿಷ್ಠನೇ ಇರಬೇಕು. ತನಗಿಂತ? ತನಗಿಂತಲೂ ಬಲಿಷ್ಠನಿರಬಹುದು. ವಿಸ್ಕಿ ಕುಡಿಯುವುದಿಲ್ಲವಂತೆ. ಗೋಡೆ ಬಿಟ್ಟು ನಿಲ್ಲುವುದೇ ಇಲ್ಲವಂತೆ. ಅವನು ಮಲಗುವ ಜಾಗವೇ ಯಾರಿಗೂ ಗೊತ್ತಿಲ್ಲವಂತೆ. ಮನುಷ್ಯರನ್ನೇ ನಂಬುವುದಿಲ್ಲವಂತೆ. ಯಾವುದೂ ಚಂದ್ರಪ್ಪನಿಗೆ ಆಶ್ಚರ್ಯವೆನ್ನಿಸಲಿಲ್ಲ. ತನ್ನ ಪರಮಶಿಷ್ಯ ಕಠಾರಿ ನಾಗನನ್ನು ಕೊಂದವನನ್ನೊಮ್ಮೆ ಹುಡುಕಾಡಿ ನೋಡಿಯೇ ಬಿಡೋಣ ಅಂತಲೂ ಅನ್ನಿಸಲಿಲ್ಲ. ಕೊಂದದ್ದು ಅವನೇ ಎಂದು ಗೊತ್ತಾದ ಮೇಲೂ ಅವನೆಡೆಗೆ ಆಕ್ರೋಶ ಉಕ್ಕಲಿಲ್ಲ. ಯಾವನೋ ಹಳ್ಳಿಗ; ಬಂದವನೇ ಒಂದು ದೊಡ್ಡ ಜೀವವನ್ನು ನೆಲಕ್ಕೆ ಮಲಗಿಸಿದ್ದಾನೆ. ತೋಳಿನ ತಾಕತ್ತು ಹೆಸರು ತಂದುಕೊಟ್ಟಿದೆ. ಭೂಗತ ಜಗತ್ತು ಅಂಥ ಸಾವಿರ ಹೆಸರುಗಳನ್ನು ಕೇಳಿಸಿಕೊಂಡಿದೆ. ಮರೆತೂ ಹೋಗಿದೆ. ನಾಳೆ ವಾಜಪ್ಪನ ಹೆಣ ನೆಲಕ್ಕೆ ಬಿದ್ದರೆ ಮುಗಿದೇ ಹೋಯಿತಲ್ಲ? ಇಂಥ ಸಾವಿರ ಪೈಲ್ವಾನರು ತನ್ನ ಮನೆಯ ಕಟ್ಟೆಗೆ ಕೈಯ್ಯೂರಿ ನಿಲ್ಲುತ್ತಾರೆ. ಜೀವಾ ಎಂಬ ಹಳ್ಳಿಗನೊಬ್ಬ ತನಗೆ ಎಂದಿಗಾದರೂ ಸರಿಸಮನಾಗಿಯಾನು ಎಂದು ಅನಿಸುತ್ತಲೇ ಇಲ್ಲ. ಸಣ್ಣಪುಟ್ಟ ಬೇಟೆಗಳಿಗೆ ತಾನು ತಲೆ ಕೆಡಿಸಿಕೊಳ್ಳಬಾರದು. ಕೆಡವಿದರೆ ಹುಲಿಯನ್ನೇ ಕೆಡವಬೇಕು. ಎಲ್ಲ ತಾನಂದುಕೊಂಡಂತೆಯೇ ಆದರೆ, ಅದು ಇನ್ನೆಷ್ಟು ದಿನ? </p>

<p> ಆದರೆ ಸಂಜೆಯ ಹೊತ್ತಿಗೆ ವಾಜಪ್ಪನ ಮೂರು ಟೀಮುಗಳು ಬೆಂಗಳೂರಿನಾದ್ಯಂತ ಇರುವ ಕ್ಲಬ್ಬುಗಳ ಮೇಲೆ ಎರಗುತ್ತಿರುವ ಸುದ್ದಿ ಒಂದಾದ ಮೇಲೊಂದರಂತೆ ಕೇಳುತ್ತಿದ್ದಂತೆಯೇ ಕ್ಲಬ್ ಕಿಟ್ಟಣ್ಣ ನೀರೊಡೆಯತೊಡಗಿದ್ದ? ಒಬ್ಬರಾದ ಮೇಲೊಬ್ಬರು ಫೋನ್

ಮಾಡಿ ಗೋಳಿಡುತ್ತಿದ್ದರು. ಆದರೆ ಆ ಪೈಕಿ ಯಾವೊಬ್ಬ ಕ್ಲಬ್ ಮಾಲಿಕನೂ ದೂರು ನೀಡಲು ಸಿದ್ಧನಿರಲಿಲ್ಲ. ಅರ್ಧ ಸತ್ತು ಮಲಗಿದರೂ ವಾಜಪ್ಪನ ಹೆಸರು ಅವರೆಲ್ಲರ ಎದೆಯಲ್ಲಿ ಒನಕೆ ಕುಟ್ಟುತ್ತಲೇ ಇತ್ತು. </p>
<p> "ಎಲ್ಲಾ ಕ್ಲಬ್ಬುಗಳ ಮೇಲೂ ಬೀಳ್ತಾ ಇದಾರೆ ವಾಜಪ್ಪನ ಹುಡುಗರು!" ಕಂಪಿಸುವ ಸ್ವರದಲ್ಲಿ ಹೇಳಿದ ಕಿಟ್ಟಣ್ಣ. </p>
<p> "ಬೀಳ್ಲಿ ಬಿಡು! ನಿರ್ವಿಕಾರವಾಗಿ ಹೇಳಿದ ಕಪಾಲಿ ರಾಮ." ಅವನಿಗೆ ಮಾನವೀಯ ಅನುಕಂಪಗಳು ಹಾಗಿರಲಿ, ಮನುಷ್ಯ ಸಹಜವಾಗಿ ಪ್ರತಿಕ್ರಿಯಿಸುವುದಕ್ಕೂ ಬರುವುದಿಲ್ಲವೇನೋ ಅನ್ನಿಸಿತು ಕಿಟ್ಟಣ್ಣನಿಗೆ. </p>
<p> "ಅವರ ಹುಡುಗರು ಇಲ್ಲಿಗೂ ಬರ್ತಾರೆ!" ಮತ್ತೆ ಕಂಪಿಸಿದ ಕಿಟ್ಟಣ್ಣ. </p>
<p> "ಅದಕ್ಕೇ ನಾನಿಲ್ಲಿ ಕುಂತಿರೋದು..." ಕಪಾಲಿ ರಾಮ ಮಾತು ಮುಗಿಸುವುದಕ್ಕೆ ಮೊದಲೇ ಸೋಫಾದ ಮೇಲೊಮ್ಮೆ ಅಸಹನೆಯಿಂದ ಕದಲಿ ಎದ್ದು ನಿಂತ. ಅವನ ಕಣ್ಣುಗಳಲ್ಲಿ ಇದ್ದಕ್ಕಿದ್ದಂತೆ ಒಂದು ಮೃಗೀಯ ಎಚ್ಚರ ಜಾಗೃತವಾಗಿತ್ತು. ಕೈಗಳೆರಡೂ ಮುಷ್ಠಿ ಬಿಗಿದವು. ಮುಖದ ಮಾಂಸ ಖಂಡಗಳು ವಿಚಿತ್ರವಾಗಿ ಕದಲಿ ಬಿಗಿದುಕೊಂಡವು. ಎದ್ದು ನಿಂತವನ ನೀಳ, ಬಲಿಷ್ಠ ಕಾಲುಗಳು, ಆ ರಾಕ್ಷಸ ತೊಡೆಗಳು ಚಕಚಕನೆ ಕದಲಾಡಿದವು. ಏನಾಗುತ್ತಿದೆಯೆಂಬುದು ಗೊತ್ತಾಗುವ ಮೊದಲೇ ಕಪಾಲಿ ರಾಮ ಛಕ್ಕನೆ ಚಿರತೆಯಂತೆ ಬಾಗಿ ಮೂಲೆಗಿದ್ದ ಮೊನಚಾದ ಮಚ್ಚೊಂದನ್ನು ಮಿಂಚಿನ ವೇಗದಲ್ಲಿ ಕೈಗೆಕತ್ತಿಕೊಂಡು ಬಿಟ್ಟ. ಅಷ್ಟು ಹೊತ್ತಿಗಾಗಲೇ ಬಾಗಿಲಲ್ಲಿ ಮನುಷ್ಯರ ನೆರಳುಗಳು ದಟ್ಟವಾಗತೊಡಗಿದ್ದವು. </p>
<p> ಆಗ ನೋಡಿದ ಕಿಟ್ಟಣ್ಣ! </p>
<p> ಹೊಸಳ್ಳಿ ದಾಸಪ್ಪ ಸಲಗದಂತೆ ಕ್ಲಬ್ಬಿನ ಮೆಟ್ಟಿಲು ಹತ್ತಿ ಬರುತ್ತಿದ್ದಾನೆ. ಬೆನ್ನ ಹಿಂದೆ ಹುಡುಗರ ಹಿಂಡೇ ಇದೆ. ಮತ್ತೊಂದು ಮೂಲೆಯಲ್ಲಿ ಸರಬಂಡೆ ಪಾಳ್ಯದ ಹಮೀದು ಆಗಲೇ ಪೊಸಿಷನ್ ತೆಗೆದುಕೊಂಡು ನಿಂತಿದ್ದಾನೆ. ಏನಿಲ್ಲವೆಂದರೂ ಮೂವತ್ತು ಜನರ ದಂಡು. ಕೈಗೆ ಸಿಕ್ಕರೆ ಈ ಕಪಾಲಿ ರಾಮನನ್ನು ರಸ್ತೆಗೆ ಕೆಡವಿಕೊಂಡು ಹರಿದು ನಾಯಿನರಿ ಪಾಲು ಮಾಡಿಬಿಡುತ್ತಾರೆ ಅನ್ನಿಸಿತು. ಕಿಟ್ಟಣ್ಣ ಗಬಕ್ಕನೆ ಎದ್ದು ಕ್ಲಬ್ಬಿನ ಇನ್ನೊಂದು ಕೋಣೆಗೆ ನುಗ್ಗಿ ಚಿಲುಕವಿಕ್ಕಿಕೊಂಡ. ಆಗಲೇ ಅವ್ವಿಗೆ ಕೇಳಿಸಿದ್ದು; </p>
<p> ವಾಜಪ್ಪನ ನೆರಳಿಗೂ ಬಿಡದೆ ಸ್ಕೂಲು ಸೇರಿಸಿದಳು. ಅವನು ಕೊಂಚ ಬೆಳೆಯುತ್ತಿದ್ದಂತೆಯೇ ಹಠ ಹಿಡಿದು ಊಟಿಯ ಸ್ಕೂಲು ಸೇರಿಸಿ ಬಂದಳು. ಹೀಗಾಗಿ ವಿಶೂ, ಮೊದಲಿನಿಂದಲೂ ಡಾನ್ ವಾಜಪ್ಪನ ಭೂಗತ ಸಾಮ್ರಾಜ್ಯಕ್ಕೆ ಅಪರಿಚಿತನಾಗಿಯೇ ಬೆಳೆದುಬಿಟ್ಟ. ಅಪ್ಪ ಬೆಂಗಳೂರಿನಲ್ಲಿ ಬಿಸಿನೆಸ್ ಮ್ಯಾನ್-ಎಂದಷ್ಟೆ ಗೆಳೆಯರಿಗೆ ಹೇಳಿಕೊಳ್ಳುತ್ತಿದ್ದ. ವಾಜಪ್ಪನಿಗೆ ಗುಂಡು ಬಿದ್ದು, ಅವನು ಆಸ್ಪತ್ರೆಯಲ್ಲಿ ಮಲಗಿದ್ದಾಗಲೂ ವಿಶುವನ್ನು ಊಟಿಯಿಂದ ಕರೆಸಿಕೊಂಡಿರಲಿಲ್ಲ ಸಿಂಧಿ ಹೆಂಗಸು. ಈಗ ವರ್ಷದ ರಜೆಯಂತೆ. ಬೆಂಗಳೂರಿಗೆ ಬಂದಿದ್ದಾನೆ. ಮುಂದಿನ ವರ್ಷ ಕಾಲೇಜಿಗೆ ಸೇರುತ್ತಾನಂತೆ. ಪಕ್ಕದಲ್ಲಿ ಕುಳಿತಿದ್ದ ಧಣಿಯ ಮಗನನ್ನು ಅಕ್ಕರೆಯ ಕಂಗಳಿಂದ ನೋಡುತ್ತಲೇ ಇದ್ದ ಜೀವಾ. ಮುಂದಿನ ಸೀಟಿನಲ್ಲಿ ನಾರಾಯಣ ಒಂದೇ ಸಮನೆ ಬಡಬಡಿಸುತ್ತಿದ್ದ. ಕಾರಿನ ವೀಲ್ ಹಿಡಿದು ಕುಳಿತಿದ್ದ ಇನ್ನೊಬ್ಬ ಹುಡುಗ ಮಧ್ಯೆ ಮಧ್ಯೆ ಮಾತಾಡುತ್ತಿದ್ದ. ನಾರಾಯಣ ಕೇಳಿದ ಪ್ರಶ್ನೆಗೆ ಆಗೊಮ್ಮೆ ಈಗೊಮ್ಮೆ 'ಹೂಂ'ಗುಡುವುದು ಬಿಟ್ಟರೆ, ಧಣಿಯ ಮಗನಿಗೆ ಅದ್ಯಾವುದರಲ್ಲೂ ಆಸಕ್ತಿಯಿಲ್ಲವೆಂಬುದು ಖಾತರಿಯಾಗುತ್ತಿತ್ತು. ಕಾರು ಮೆಜೆಸ್ಟಿಕ್ಕಿನಿಂದ ಹೊರಟು, ಆನಂದರಾವ್ ಸರ್ಕಲು ದಾಟಿ ಇನ್ನೇನು ನೃಪತುಂಗ ರಸ್ತೆಗೆ ತಿರುಗಬೇಕು ಎಂಬಷ್ಟರಲ್ಲಿ ಏನೋ ಆಗಿಹೋಯಿತು. ವೀಲ್ ಹಿಡಿದ ಹುಡುಗನಿಗೆ ಜೀವಾ ಸನ್ನೆ ಮಾಡಿದ. ಓಡುತ್ತಿದ್ದ ಕಾರು ಕೊಂಚ ಎಡಕ್ಕೆ ಸರಿಯಿತು. ಇದ್ದಕ್ಕಿದ್ದಂತೆ ಜೀವಾ ಡೋರು ತೆಗೆದುಕೊಂಡು, ಫುಟ್‌ಪಾತಿನ ಮೇಲಕ್ಕೆ ಹಾರಿ ಎದುರಿನಿಂದ ಶರವೇಗದಲ್ಲಿ ಓಡಿಬರುತ್ತಿದ್ದ ವ್ಯಕ್ತಿಯೊಬ್ಬನನ್ನು ಅನಾಮತ್ತಾಗಿ ಕೆಡವಿ ನೆಲಕ್ಕೆ ಉರುಳಿಸಿಯೇ ಬಿಟ್ಟ.' ಹಾಗೆ ಓಡಿಬರುತ್ತಿದ್ದ ವ್ಯಕ್ತಿಯ ಕೈಯಲ್ಲಿದ್ದ ಹೆಂಗಸರ ವ್ಯಾನಿಟಿ ಬ್ಯಾಗಿನಂತಹುದು ಹಾರಿ ಅನತಿ ದೂರಕ್ಕೆ ಬಿತ್ತು. ಓಡಿಬರುತ್ತಿದ್ದವನನ್ನು ಅದೆಷ್ಟೋ ದೂರದಿಂದ ಅಟ್ಟಿಸಿಕೊಂಡು ಬರುತ್ತಿದ್ದ ನಾಲ್ಕಾರು ಜನ ಹುಡುಗರು, ಸನಿಹಕ್ಕೆ ಬಂದವರೇ ಜೀವಾ ಕೆಡವಿದವನ ಮೇಲೆ ಬಿದ್ದು, ಒಂದೇ ಒಂದು ಮಾತೂ ಆಡದೆ ಹಿಗ್ಗಾಮುಗ್ಗಾ ಥಳಿಸತೊಡಗಿದರು. ಜೀವಾ ವ್ಯಾನಿಟಿ ಬ್ಯಾಗು ಕೈಗೆತ್ತಿಕೊಂಡು ಅದನ್ನೇನು ಮಾಡಬೇಕೋ ತೋಚದವನಂತೆ ನಿಂತುಬಿಟ್ಟ. ಕಾರಿನಲ್ಲಿ ಕುಳಿತು ಇದನ್ನೆಲ್ಲನೋಡುತ್ತಿದ್ದ ಟಗುರು ನಾರಾಯಣ ಚಪಚಪನೆ ಎರಡು ಬಾರಿ ಹಣೆ ಚಚ್ಚಿಕೊಂಡ. ಜೀವಣ್ಣನಿಗೆ ಇದೆಂಥ ಹುಚ್ಚು? ಬೆಂಗಳೂರಿನ ಬೀದಿಗಳಲ್ಲಿ ಪ್ರತಿನಿತ್ಯ ಇಂಥ ಸಾವಿರಾರು ಘಟನೆಗಳಾಗುತ್ತವೆ.
</p>

<p> ಇಂಗ್ಲಿಷರಿಗೆ ಹುಟ್ಟಿದ್ದಾನೇನೋ ಎಂಬಷ್ಟು ಬೆಳ್ಳಗಿದ್ದ. ಜೀವಾ ಅಂದ್ರೆ ಇವನೇ ಸಾರ್. ವಾಜಪ್ಪನ ಬಲಗೈಯಂಥ ಮನುಷ್ಯ. ಅಂಡ್ ಎ ನಟೋರಿಯಸ್ ಕಿಲ್ಲರ್. ಇಷ್ಟು ವರ್ಷದಲ್ಲಿ ಇವನು ಪೊಲೀಸರ ಕೈಗೆ ಸಿಗ್ತಾ ಇರೋದು, ಇದೇ ಮೊದಲು ನೋಡಿ. ಹಿಂದೆ ಉಪ್ಪಾರ ಪೇಟೇಲಿದ್ದಾಗ, ನಾನೇ ಒಂದ್ಸಲ ಅರೆಸ್ಟ್ ಮಾಡಿ ರಾತ್ರಿಯಿಡೀ ವರ್ಕ್ ಮಾಡಿದ್ದೆ. ಆದರೆ ಆಮೇಲೆ ಜೈಲ್ ಕಸ್ಟಡಿಯಿಂದ ಎಸ್ಕೇಪ್ ಆಗಿಬಿಟ್ಟ. ಕಪಾಲಿ ರಾಮನ ಮರ್ಡರ್ ಕೇಸಿನಲ್ಲೂ ಇವನನ್ನು ಹುಡುಕಿದ್ವಿ. ನನ್ಮಗ, ಆಗ ಸಿಗಲಿಲ್ಲ. ಎಸಿಪಿ ಡಿಸೋಜಾ ಒಂದು ಚಿಕ್ಕ ಆವೇಶಕ್ಕೆ ಒಳಗಾದವನಂತೆ ಮಾತನಾಡುತ್ತಲೇ ಇದ್ದ. ಕಮೀಶನರರ ಎದುರಿನಲ್ಲಿ ಕೊಂಚ ಕುಗ್ಗಿಕೊಂಡು ನಿಂತಿದ್ದನಾದರೂ ಡಿಸೋಜಾನ ದೈತ್ಯ ದೇಹದ ತಾಕತ್ತೆಂತಹುದು ಎಂಬುದು ಜೀವಾನಿಗೆ ಚೆನ್ನಾಗಿ ಗೊತ್ತಿತ್ತು. ಮತ್ತು ಹಳೆಯ ಲೆಕ್ಕವನ್ನೆಲ್ಲ ಇವನು ಚುಕ್ತಾ ಮಾಡದೆ ಈ ಬಾರಿ ಆಚೆಗೆ ಕಳಿಸಲಾರ ಎಂಬುದು ಅಂದಾಜಾಗುತ್ತಿತ್ತು. ಅವನಿಗೆ ಆತನಕ ಗೊತ್ತಾಗದ್ದು ಮತ್ತು ಗೊಂದಲಕ್ಕೀಡು ಮಾಡಿದ್ದು ಒಂದೇ ಸಂಗತಿ; ಅದೆಂದರೆ, ನೀಲಸಂದ್ರದ ಬಂಗಲೆಗೆ ನುಗ್ಗಿರುವ ಪೊಲೀಸರು ತನ್ನೊಂದಿಗೆ ವಿಶುವನ್ನೂ ಬಂಧಿಸುತ್ತಾರಾ? </p>

<p> ಯಾಕೆ ಬಂಧಿಸುತ್ತಾರೆ? </p>

<p> "ಇವ್ನು ವಿಶೂ ಅಂತ - ವಾಜಪ್ಪನ ಮಗ ಸಾರ್. ದಿ ಓನ್ಲಿ ಸನ್. ಕಾಲೇಜಿನಲ್ಲಿ ಹೆವಿ ವೆಯ್ಟ್ ಲಿಫ್ಟರ್. ಫೀಲ್ಡಿಗೆ ಇಳಿದಾ ಅಂದ್ರೆ ಅವರಪ್ಪನ್ನೂ ಮೀರಿಸಿ ಬಿಡ್ತಾನೆ. ಸ್ವಲ್ಪ ಟ್ರೀಟ್‌ಮೆಂಟ್ ಈಗಲೇ ಕೊಟ್ರೆ ಒಳ್ಳೇದು ಸಾರ್!" ಎಸಿಪಿ ಡಿಸೋಜಾ ವಿವರಣೆ ನೀಡತೊಡಗಿದ್ದ. ಡಾನ್ ವಾಜಪ್ಪನ ಕೋಣೆಯನ್ನೇ ಬಿಟ್ಟ ಕಣ್ಣುಗಳಲ್ಲಿ ನೋಡುತ್ತ ನಿಂತಿದ್ದ ಕಮೀಶನರ್ ಅತ್ಯಂತ ನಿರ್ಭಾವುಕ ದನಿಯಲ್ಲಿ, </p>

<p> "ಟೇಕ್ ದೆಮ್ ಟು ಕಸ್ಟಡಿ" ಎಂದಷ್ಟೆ ಹೇಳಿದ್ದ. </p>

<p> ಅದನ್ನು ಜೀವಾ ಅರ್ಥ ಮಾಡಿಕೊಳ್ಳಲಾಗದೆ ವಿಶೂನ ಕಡೆಗೊಮ್ಮೆ ತಿರುಗಿ ನೋಡಿದ. ವಿಶೂನ ಮುಖದಲ್ಲಿ ಒಂದು ಮಂಜುಗಡ್ಡೆ ಸಾಂದ್ರಗೊಳ್ಳುತ್ತಿದೆಯೆಂಬುದು ಸ್ಪಷ್ಟವಾಗುತ್ತಿತ್ತು! ಮಾರನೆಯ ದಿನ ಪತ್ರಿಕೆಗಳು ಬೆಂಗಳೂರಿನ ಭೂಗತ ಲೋಕದ ಮಕುಟವಿಲ್ಲದ ಮಹಾರಾಜ ಎಂ.ಪಿ.ವಾಜಪ್ಪ ಎಂಬ ಡಾನ್‌ನ ಹತ್ಯೆಯಾದ ಬಗ್ಗೆ ಪುಟಗಟ್ಟಲೆ ಬರೆದಿದ್ದವು. </p>

<p> ಸೀಮೆಣ್ಣೆ ಸಿದ್ದನ ಏಕೈಕ ಬಲಹೀನತೆಯೇ ಗಿಡ್ಡ! ಅವನಿಲ್ಲದೆ ಬದುಕಿದ ನಾಲ್ಕು ವರ್ಷಗಳ ಅವಧಿಯನ್ನು ಸೀಮೆಣ್ಣೆ ಸಿದ್ದ - ಒಂದು ಶಾಪದಂತೆ ಕಳೆದುಬಿಟ್ಟಿದ್ದ. ಗಾಯತ್ರಿ ನಗರದಲ್ಲಿ ಚಿಕ್ಕದೊಂದು ಟೈಲರ್ ಅಂಗಡಿಯಿಟ್ಟುಕೊಂಡಿರುವ ಗಿಡ್ಡನ ಅಸಲಿ ಹೆಸರು ಗೋವಿಂದರಾಜು. ಆದರೆ, ಪೂರ್ತಿಯಾಗಿ ನಾಲ್ಕು ಅಡಿಯೆತ್ತರಕ್ಕೂ ಬೆಳೆಯದ ಅವನನ್ನು ಇಡೀ ಬೆಂಗಳೂರು 'ಗಿಡ್ಡ' ಎಂದೇ ಗುರುತಿಸುತ್ತಿತ್ತು. ಭೂಗತ ಜಗತ್ತಿಗೂ ಅವನಿಗೂ ಸುತರಾಂ ಸಂಬಂಧವಿರಲಿಲ್ಲ. ಆದರೆ ಅದೇಕೋ, ಅವನಿಗೂ ಸೀಮೆಣ್ಣೆ ಸಿದ್ದನಿಗೂ ಶತಶತಮಾನಗಳಂತಹ ಸ್ನೇಹವೊಂದು ಬೆಳೆದು ಬಿಟ್ಟಿತ್ತು. ತನ್ನ ಮೋಟರ್ ಸೈಕಲ್ಲಿನಲ್ಲಿ ಗಿಡ್ಡನನ್ನು ಹಿಂದೆ ಕೂಡಿಸಿಕೊಂಡು ಬೆಂಗಳೂರಿನ ರಸ್ತೆಗಳಲ್ಲಿ ಸೀಮೆಣ್ಣೆ ಸಿದ್ದ ಆಕ್ಸಿಲರೇಟರ್ ತಿರುಗಿಸುತ್ತಿದ್ದರೆ, ಆ ವೇಗಕ್ಕೆ ಬೆದರಿದ ಗಿಡ್ಡ ಚಿಕ್ಕ ಹುಡುಗನಂತೆ ಸಿದ್ದನ ಬೆನ್ನಿಗೆ ಅಡರಿಕೊಂಡು ಕುಳಿತಿರುತ್ತಿದ್ದ. ನೋಡಲು ಅದೊಂದು ತಮಾಷೆಯ ದೃಶ್ಯದಂತಿರುತ್ತಿತ್ತು. ಗಾಯಿತ್ರಿ ನಗರದ ಟೈಲರ್ ಗಿಡ್ಡ ಗೋವಿಂದರಾಜನೆಂಬ ನಿರುಪದ್ರವಿ ಪ್ರಾಣಿಗೂ, ಈ ಸೀಮೆಣ್ಣೆ ಸಿದ್ದನೆಂಬ ಡಾಬರ್‌ಮನ್ ಜಾತಿಯ ಹಸೀ ಹಂತಕನಿಗೂ ಯಾವ ಸಂಬಂಧವೋ? </p>

<p> ಜೀವಾ ಅದನ್ನೂ ತಿಳಿದುಕೊಂಡಿದ್ದ. </p>

<p> "ನೋಡು ಜೇಬೀ, ಕೂತ್ಕೊಂಡು ಮಾತಾಡಿ ಸುಖಾ ಇಲ್ಲ. ನೀನು ಮೊದ್ಲು ಡಿಸೋಜಾ ಸಾಹೇಬನ ಹತ್ರ ಮಾತು ಮುಗಿಸ್ಕೋ. ವಾಜಪ್ಪನ ಮಗ ವಿಶೂಗೇ ಸೀದಾ ಕೈ ಇಡಾಣ. ಆ ಹುಡುಗನ್ನ ಕಂಡ್ರೆ ಜೀವಾ ಪ್ರಾಣ ಬಿಡ್ತಾನೆ. ಎಷ್ಟಾದರೂ ಧಣಿ ಮಗ. ಜೊತೇಲೇ ಬೆಳದೋನು. ನಾವು ಕೈಯಿಟ್ವಿ ಅಂತ ಗೊತ್ತಾದ ಕೂಡ್ಲೆ ಎಲ್ಲಿದ್ರೂ ಈಚೆ ಬಂದು ಬಿಡ್ತಾನೆ. ವಾಜಪ್ಪನ ಮಗ ವಿಶೂ ಎಲ್ಲಿ ಸಲೀಸಾಗಿ ಸಿಕ್ತಾನೆ ಅಂತ ನಾನು ಪತ್ತೆ ಮಾಡ್ತೀನಿ. ಎರಡು ದಿನ ಟೈಮು ಕೊಡು. ಅಷ್ಟರಲ್ಲಿ ನೀನು ಡಿಸೋಜಾ ಜೊತೆ ಮಾತು ಮುಗಸು. ಇನ್ನೂ ಚಿಕ್ಕ ಹುಡುಗ. ಮರ್ಡರೇ ಮಾಡಬೇಕು ಅಂತಿಲ್ಲ. ಸುಮ್ನೆ ಮೈಮ್ಯಾಲೆ ಬಿದ್ರೆ ಸಾಕು; ಎರಡು ತಿಂಗಳು ಆಸ್ಪತ್ರೇಲಿರ್ತಾನೆ. ಅವಾಗ ಜೀವಾ ಈಚೆಗೆ ಬರದಂಗೆ ಇರೋದಿಲ್ಲ. ಅಷ್ಟು ಮಾಡೋಣ!" ನಿರ್ಣಯವನ್ನು ಘೋಷಿಸಿಯೇ ಬಿಟ್ಟ ಜಾನಿ. ಆಲ್ಕಂಟ ಒಮ್ಮೆ ಪುಸಪುಸನೆ ನಕ್ಕ. ಡಾಬರ್ ಕಣ್ಮುಚ್ಚಿ ಕಣ್ತೆರೆಯಿತು. ಗೇಬ್ರಿ ನಿಟ್ಟುಸಿರಾದ. </p>

<p> ಜೀವಾ ತನ್ನನ್ನು ಯಾವುದೋ ಮೂಲೆಯಲ್ಲಿ ನಿಂತು ಗಮನಿಸುತ್ತಿರಬಹುದು. ಆಲ್ಕಂಟನ ಹೆಣ ನೋಡುವುದಕ್ಕೆ ತಾನು ಬಂದೇ ಬರುತ್ತಾನೆ ಎಂಬುದನ್ನು ಜೀವಾ ಊಹಿಸದೆ ಇರಲಾರ. ಇವತ್ತಿನ ಗೇಬ್ರಿಯೇ ಬೇರೆ. ನಾಲ್ಕೂವರೆ ವರ್ಷಗಳ ಹಿಂದೆ ಭಕ್ತಿ ಗಾರ್ಡನ್ನಿನ ಮನೆಯಲ್ಲಿ ಕುಳಿತು, ಸೀನಪ್ಪನ ಹೆಣ ನೋಡಿ ಬರಲು ಸಾಧ್ಯವಾಗದೆ ನಿಸ್ಸಹಾಯಕತೆಯಿಂದ ತಲೆ ಕೊಡವುತ್ತ ಕುಳಿತಿದ್ದ ಅವತ್ತಿನ ಗೇಬ್ರಿಯೇ ಬೇರೆ. ಇವತ್ತು ಆಲ್ಕಂಟನ ಹೆಣ ನೋಡಲು ತಾನು ಬಾರದೆ ಹೋದರೆ ಇಡೀ ಭೂಗತ ಜಗತ್ತು ಕ್ಯಾಕರಿಸಿ ನಗುತ್ತದೆ. ಬದುಕಿದ್ದಾಗಿನ ಮಾತು ಬೇರೆ; ರೌಡಿಯೊಬ್ಬ ಸತ್ತ ಕೂಡಲೆ ಅವನನ್ನು ಬಿಡುವಿಲ್ಲದೆ ಕೊಂಡಾಡುತ್ತದೆ ಭೂಗತ ಜಗತ್ತು. ಆಲ್ಕಂಟನೊಬ್ಬ ಇಲ್ಲದೆ ಹೋಗಿದ್ದಿದ್ದರೆ ಮತ್ತೆ ಎದ್ದು ನಿಂತು ವಾಜಪ್ಪನಂಥ ವಾಜಪ್ಪನನ್ನು ಉಡಾಯಿಸಿ ಬಂದು ಬೆಂಗಳೂರಿನ ಭೂಗತ ಸಿಂಹಾಸನದ ಮೇಲೆ ಕೈಯಿಡುತ್ತಿದ್ದನಾ ಗೇಬ್ರಿ? ಗೇಬ್ರಿಯ ಅಸಲಿ ತಾಕತ್ತೇ ಆಲ್ಕಂಟ. ಎಂಥ ಮಜಬೂತಾದ ಪಂಟರು ಅವನು? ಕಡೆಯ ದಿನದ ತನಕ ಹಾಲು ಮಾರಿಕೊಂಡು ಬದುಕಿದ ಕಷ್ಟಜೀವಿ. ಕೈಲಿದ್ದ ಹಾಲಿನ ಕ್ಯಾನು ಕೆಳಕ್ಕೆ ಬಿದ್ದು, ಹಾಲು ಚೆಲ್ಲಿ ಹೋಗುತ್ತದಲ್ಲಾ ಎಂಬ ಒಂದೇ ಸಂಕಟಕ್ಕೆ ಬಿದ್ದು, ತಿರುಗಿನಿಂತು ಬಡಿದಾಡಲಿಲ್ಲವಂತೆ ಆಲ್ಕಂಟ. ಕೈಯಲ್ಲಿ ಕ್ಯಾನ್‌ನ ಬದಲು ಚಿಕ್ಕದೊಂದು ಕತ್ತಿಯಿದ್ದಿದ್ದರೂ ಸಾಕು, ಆಲ್ಕಂಟನನ್ನು ಯಾರಾದರೂ ಹೀಗೆ ಬಡಿದು ಕೊಲ್ಲಲು ಸಾಧ್ಯವಿತ್ತೆ? ಏನೇ ಹೇಳಲಿ ಜಗತ್ತು; ಆಲ್ಕಂಟನಿಗಿಂತ ದೊಡ್ಡ ಸಾಹಸಿ ಮತ್ತೊಬ್ಬನಿಲ್ಲ. ಗೇಬ್ರಿಗೆ ಇದ್ದ ಅಸಲಿ ತಾಕತ್ತೇ ಆಲ್ಕಂಟ. ಪಾಪ! ಎಷ್ಟು ನೊಂದಿರುತ್ತಾನೋ ಗೇಬ್ರಿ. ಹೆಣ ನೋಡಲು ಬಂದೇ ಬರುತ್ತಾನೆ. ಬಾರದಿದ್ದರೆ ಅವನಿಗಿಂತ ಪಾಪಿ ಇನ್ನೊಬ್ಬನಿಲ್ಲ ಅಂತಾಗುತ್ತದೆ. ವರ್ಷಗಟ್ಟಲೆ ಜೊತೇಲಿದ್ದವನು. ಬೇಕಾದರೆ ನೋಡ್ತಿರು; ಗೇಬ್ರಿ ಬಂದೇ ಬರುತ್ತಾನೆ. </p>
<p> ಭೂಗತ ಜಗತ್ತು ತನ್ನೊಂದಿಗೆ ತಾನು ಮಾತನಾಡಿಕೊಳ್ಳುವುದೇ ಈ ಧಾಟಿಯಲ್ಲಿ. ನರಸಿಂಹರಾಜಾ ಕಾಲನಿಯ ಅನೇಕ ಹೆಂಗಸರು ಅವತ್ತು ಬೆಳಗಿನ ಜಾವ ಆಲ್ಕಂಟನ ಹೆಣ ರಸ್ತೆಯಲ್ಲಿ ನಿಶ್ಚೇಷ್ಟಿತವಾಗಿ ಬಿದ್ದದ್ದನ್ನು ಖುದ್ದಾಗಿ ಬಂದು ನೋಡಿ, ಸರಕ್ಕನೆ ಮನೆಗಳಿಗೆ ಹಿಂತಿರುಗಿ ಸ್ನಾನ ಮಾಗಿ, ಲೀಟರುಗಟ್ಟಲೆ ಹಾಲು ಕಾಯಿಸಿ ಪಾಯಸ ಮಾಡಿ ಅಕ್ಕಪಕ್ಕದವರಿಗೆಲ್ಲ ಹಂಚಿದ್ದರು ಮತ್ತು ಅವರ ಮುಖಗಳಲ್ಲಿ ಹಳೆಯ ಯಾತನೆಯೊಂದು ಶಾಶ್ವತವಾಗಿ ಸರಿದು ಹೋಗಿತ್ತು ಎಂಬುದನ್ನು ಭೂಗತ ಜಗತ್ತು ಗೊತ್ತಿದ್ದೂ ಗಮನಿಸುವುದಿಲ್ಲ. ಒಂದೇ ಒಂದು ಕಂಪ್ಲೇಂಟು ಕೊಡದೆ, ಯಾರೊಂದಿಗೂ ಹೇಳಿಕೊಳ್ಳದೆ, ಜೀವನ ಪರ್ಯಂತ ಯಾರೇ ಬಂದು ಮನೆಯ ಕದ ತಟ್ಟಿ “ಹಾಲೂ” ಅಂತ ಕೂಗಿದರೂ ಮತ್ತೆ ಆಲ್ಕಂಟನೇ ಬಂದನೆಂಬಂತೆ ತತ್ತರಿಸಿ ಬೆವರೊಡೆಯುತ್ತಿದ್ದ ನೂರಾರು ಗೃಹಿಣಿಯರ ಒಟ್ಟುಗೂಡಿದ ಶಾಪವೊಂದು ಆಲ್ಕಂಟನನ್ನು ರಸ್ತೆಬದಿಯ ಹೆಣವನ್ನಾಗಿಸಿಬಿಟ್ಟಿತು ಎಂಬ ಸತ್ಯವನ್ನು ಭೂಗತ ಜಗತ್ತು ಗೊತ್ತಿದ್ದೂ ಒಪ್ಪಿಕೊಳ್ಳುವುದಿಲ್ಲ. </p>
<p> ಯಲಹಂಕ ದಾಟಿಕೊಂಡು ಮೊಬೈಕು ಶರವೇಗದಲ್ಲಿ ಓಡುತ್ತಿದ್ದರೆ, ತನ್ನಲ್ಲಿ ನಿಮಿಷಕ್ಕೊಂದರಂತೆ ಸ್ಫುರಿಸುತ್ತಿರುವ ಆಲೋಚನೆಗಳಿಗೆ ತಾನೇ ಆಶ್ಚರ್ಯಗೊಳ್ಳತೊಡಗಿದ್ದ ಜೀವಾ. ಇವತ್ತು ದೊಡ್ಡದೊಂದು ಘಟನೆ ಜರುಗಲಿದೆ ಎಂಬುದು ಉಳಿದೆಲ್ಲರಿಗಿಂತ ಹೆಚ್ಚಾಗಿ ಅವನಿಗೆ ಗೊತ್ತಿತ್ತು. ಅನತಿ ದೂರದಲ್ಲಿ ರಸ್ತೆ ಪಕ್ಕಕ್ಕೆ ಕೊಂಚ ಮರೆಯಾಗಿ ಬೈಕು ನಿಲ್ಲಿಸಿದವರೇ, ಅವರು ವಿಂಡ್ಸರ್ ಮೇನರ್‌ನ ಬ್ರಿಡ್ಜಿನ ಮೇಲ್ಭಾಗಕ್ಕೆ ನಡೆದು ಹೋದರು. ಬ್ರಿಡ್ಜಿನ ತುದಿಯಲ್ಲಿ ಕಾಣಿಸಿದ ಹುಡುಗ ಅವರೆಡೆಗೆ ಕಂಡೂ ಕಾಣದಂತೆ ಕೈ ಮಾಡಿದ. ನಡೆದು ಬರಲು ಯಾವುದೇ ಅನುಮಾನ, ಆತಂಕಗಳು ಬೇಕಾಗಿಲ್ಲ ಎಂಬ ಸೂಚನೆಯದು. ಒಂದು ಕ್ಷಣದ ಮಟ್ಟಿಗೆ ಜೀವಾನ ಈ ನಿರಂತರ ಅನುಮಾನದ ಬಗ್ಗೆ ಮನಸ್ಸಿನಲ್ಲೇ ಸಿಡಿಮಿಡಿಗೊಂಡಿದ್ದ ವಿಶೂ. ಅದೆಂಥ ಅನುಮಾನದ ಪ್ರಾಣಿ ಈತ? ಅಲ್ಲಿ ವಿಂಡ್ಸರ್ ಮೇನರ್‌ನ ಹಿಂಭಾಗದಲ್ಲಿ ತಮಗಾಗಿ ಕಾಯುತ್ತಿರುವುದು ಮತ್ಯಾರೂ ಅಲ್ಲ; ಹಮೀದು. ಕಡೆಗೆ ಹಮೀದುವನ್ನೇ ಅನುಮಾನಿಸಿ ಬಿಡುವುದೇ? ಅಪ್ಪನ ಕಾಲದಿಂದಲೂ ನೀಲಸಂದ್ರದ ಬಂಗಲೆಗೆ ನಿಷ್ಠೆಯಿಂದಿದ್ದವನು. ಈ ಜೀವಾ ಯಾರನ್ನೂ ಬಿಡುವುದಿಲ್ಲ. ಅಸಲು ಮನುಷ್ಯ ಸಂಕುಲವನ್ನೇ ಅನುಮಾನಿಸುತ್ತಾನೆ. ಆ ತೋಟದ ಮನೆಯಲ್ಲೂ ಇದೇ ಕಥೆ. ಅಷ್ಟೊಂದು ಪ್ರೀತಿಯಿಂದ ತೋಟದ ಯಜಮಾನ ತರುವ ಬುತ್ತಿಗಂಟು ಬಿಚ್ಚಿದವನೇ, ಎಷ್ಟೇ ಹಸಿವೆಯಾಗಿದ್ದರೂ ಅಂಗಳದ ನಾಯಿಗೊಂದು ತುತ್ತು ತಿನ್ನಿಸಿ, ಹತ್ತು ನಿಮಿಷಗಳಾದ ಮೇಲೆಯೇ ಜೀವಾ ಊಟಕ್ಕೆ ಕೂಡುವುದು. ಕೆಲವೊಮ್ಮೆ ಇದೆಲ್ಲ ಅತೀ ಅನಿಸುತ್ತದೆ. ಆದರೆ ವಿಶೂಗೆ ಗೊತ್ತು; ಜೀವಾನ ಅನುಮಾನಗಳು ಕೆಲವು ಸಲ ನಿಜವಾಗಿವೆ! ತಾವಿಬ್ಬರೂ ಬೆಂಗಳೂರು ಬಿಟ್ಟು ಯಾವುದೋ ಕಾಲವಾದಂತಾಗಿದೆ. ಇಲ್ಲಿಂದ ಹೋದ ನಂತರ ಹಮೀದ್ ಮಾಮು, ಶಿವಾಜಿನಗರದ ನಯಾಜು, ಹೊಸಳ್ಳಿ ದಾಸಪ್ಪ - ಎಲ್ಲ ಏನೇನಾಗಿದ್ದಾರೋ? ಯಾರ್ಯಾರ ನಿಯತ್ತುಗಳು ಎಲ್ಲಿ ಪಲ್ಲಟಗೊಂಡಿವೆಯೋ? ಜೀವಾ ಅನುಮಾನಿಸುವುದರಲ್ಲಿ ಅರ್ಥವಿದೆ ಅಂದುಕೊಂಡು ಸುಮ್ಮನಾದ ವಿಶೂ. ಅಷ್ಟರಲ್ಲಿ ಅವರು ವಿಂಡ್ಸರ್ ಮೇನರ್‌ನ ಹಿಂಭಾಗಕ್ಕೆ ತಲುಪಿಯಾಗಿತ್ತು. </p>

<p> ಆ ಇಳಿ ಬಿಸಿಲಿನಲ್ಲಿ, ಏನೇನೂ ಅವಸರವಿಲ್ಲದವನ ಹಾಗೆ ಕೈಯಲ್ಲೊಂದು ಪತ್ರಿಕೆ ಹಿಡಿದುಕೊಂಡು ಕಾಲೆಳೆಯುತ್ತ ಬರುತ್ತಿದ್ದ ಗಿಡ್ಡ ಗೋಯಿಂದರಾಜ ಕಾಣಿಸಿಬಿಟ್ಟ. ಜನ ಇವನನ್ನು ಯಾಕೆ 'ಗಿಡ್ಡ' ಅಂತಾರೆ ಎಂಬುದಕ್ಕೆ ತಕ್ಷಣದ ವಿವರಣೆಯಂತಿದ್ದಾನೆ ಅಂದುಕೊಂಡ ಜೀವಾ. ತಾನು ನೆಟ್ಟಗೆ ನಿಂತುಕೊಂಡರೆ ಸರಿಯಾಗಿ ತನ್ನ ತೊಡೆಯ ಎತ್ತರಕ್ಕೂ ಬರಲಾರ. ಅಷ್ಟು ಕುಳ್ಳಗಿದ್ದಾನೆ. ಎರಡೂ ಕಾಲುಗಳನ್ನು ಬಿಲ್ಲಿನಂತೆ ಬಾಗಿವೆ. ತಾನೇ ಹೊಲೆದುಕೊಂಡ ಒಂದು ಜುಬ್ಬಾ ಧರಿಸಿದ್ದಾನೆ. ಮಕ್ಕಳ ಸೈಜಿನ ಪ್ಯಾಂಟು. ತಲೆಗೂದಲು ಮಟ್ಟಸವಾಗಿ ಬಾಚಿದಂತಿದೆ. ಮುಖದ ಮೇಲೆ ಎಲ್ಲೂ ಕೂದಲಿಲ್ಲ. ಕಣ್ಣಿಗೆ ಕಾಡಿಗೆ ಹಚ್ಚಿದ್ದಾನೋ ಅಥವಾ ಅವು ಇರುವುದೇ ಹಾಗೋ ಗೊತ್ತಾಗುತ್ತಿಲ್ಲ. ಮೂಗು ಮಾತ್ರ ಅಗಲ ಬೆನ್ನಿನದೊಂದು ಕಪ್ಪೆಯಂತಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ- ಕುರುಪಿ. ಇಂಥದೊಬ್ಬ ಕುಳ್ಳನನ್ನು ಆ ಸೀಮೆಣ್ಣೆ ಸಿದ್ದ ಯಾಕಾದರೂ ಬೆನ್ನಿಗೆ ಕಟ್ಟಿಕೊಂಡು ತಿರುಗುತ್ತಾನೋ ಅನಿಸಿತ್ತು ಜೀವಾನಿಗೆ. ಮಸಾಜ್ ಪಾರ್ಲರಿನ ಎದುರಿನಲ್ಲಿ ನಿಂತಿರುವುದು ಬೆಂಗಳೂರು ಭೂಗತ ಜಗತ್ತನ್ನು ಎರಡನೇ ಚಂಡಮಾರುತಕ್ಕೆ ಈಡು ಮಾಡಲು ಬಂದಿರುವ ಜೀವಾ ಎಂಬ ಚಿಕ್ಕದೊಂದು ಕಲ್ಪನೆಯೂ ಇಲ್ಲದೆ ಕಾಲೆಳೆಯುತ್ತ ಬರುತ್ತಿದ್ದ ಗಿಡ್ಡ ಗೋಯಿಂದರಾಜನ ಕಡೆಗೊಮ್ಮೆ ನೋಡಿ ಕಿರೀಟಿಗೆ ಇಶಾರೆ ಮಾಡಿದ ಜೀವಾ, ಮೊಬೈಕಿಗೆ ಕಾಲು ತಾಕಿಸಿದ. ಏನು ಜರುಗುತ್ತಿದೆಯೆಂಬುದು ಗೊತ್ತಾಗುವ ಮೊದಲೇ ಹದ್ದಿನಂತೆ ಹಿಂದಿನಿಂದ ಬಂದ ಕಿರೀಟಿ ತನ್ನ ಬಲಗೈಯೊಂದರಲ್ಲೇ ಅನಾಮತ್ತಾಗಿ ಗಿಡ್ಡ ಗೋಯಿಂದರಾಜನನ್ನು ಎತ್ತಿಕೊಂಡು ಕದಲಲು ಅಣಿಯಾಗಿದ್ದ  ಜೀವಾನ ಮೊಬೈಕು ಹತ್ತಿಬಿಟ್ಟ. ಗಿಡ್ಡ ಗೋಯಿಂದರಾಜನ ಕಣ್ಣುಗಳಲ್ಲಿ ಭಯವೆಂಬುದು ಪ್ರವಾಹದಂತೆ ಬಂದಿತ್ತು. ಕಿರಿಚಲು ಬಾಯ್ತೆರೆದವನಿಗೆ ಸುಮ್ಮನೆ ಮೊಳಕೈಯಲ್ಲೊಮ್ಮೆ ಗುದ್ದಿದ ಕಿರೀಟಿ. ಕಿರಿಚಿದರೆ ಸಾಯಿಸಿಬಿಡ್ತೀನಿ ಅಂದದ್ದೇ ಸಾಕಿತ್ತು. ಗಿಡ್ಡ ಭಯಗೊಂಡ ಮಗುವಿನಂತೆ ಮೊಬೈಕು ಓಡಿಸುತ್ತಿದ್ದ ಜೀವಾನ ಬೆನ್ನನ್ನು ಗಟ್ಟಿಯಾಗಿ ಅವಚಿಕೊಂಡು ಕುಳಿತು ಬಿಟ್ಟ. ಬೈಕು ಹೊಸಳ್ಳಿಯ ಸಂದಿಗಳೊಳಕ್ಕೆ ನುಗ್ಗಿತ್ತು. ಹೊಸಳ್ಳಿಯ ದಾಸಪ್ಪನ ಮನೆಯ ಹಿತ್ತಿಲಿಗೆ ಕರೆದೊಯ್ದು ಕೂಡಲೆ ಗಿಡ್ಡ ಗೋಯಿಂದರಾಜ ಸಣ್ಣ ದನಿಯಲ್ಲಿ ಅಳಲು ಪ್ರಾರಂಭಿಸಿದ್ದಷ್ಟೇ ಅಲ್ಲದೆ, ಎರಡು ವರ್ಷಗಳ ಹಿಂದೆ ಹೇಗೆ ತಾನು ದಾಸಪ್ಪನನ್ನು 'ಮಾವಾ' ಎಂದು ಕರೆದು ವ್ಯಾನು ಹತ್ತುವಂತೆ ಮಾಡಿದ ಮತ್ತು ಹೇಗೆ ನೆಲಮಂಗಲದ ದಿಕ್ಕಿಗೆ ಓಡೋಡುತ್ತಲೇ ವ್ಯಾನಿನಲ್ಲಿದ್ದ ಗೇಬ್ರಿ ಹಾಗೂ ಸೀಮೆಣ್ಣೆ ಸಿದ್ದ ಅವನನ್ನು ಎರಡು ಕನಸು ಕ್ಯಾಸೆಟ್ಟು ಹಾಕಿಕೊಂಡು ದಾರುಣವಾಗಿ ಕತ್ತರಿಸಿ ಹಾಕಿದರು ಎಂಬುದನ್ನೂ ಸಾದ್ಯಂತವಾಗಿ ವಿವರಿಸಿದ. ಇಷ್ಟಾಗಿ, ಆ ಕೊಲೆಯಲ್ಲಿ ತನ್ನ ಪಾತ್ರ ಏನೇನೂ ಇಲ್ಲವೆಂಬುದನ್ನು ಅವನು ಪದೇಪದೇ ಹೇಳಿದ್ದ. ವಿಶೂ ಅದೇಕೋ, ದಾಸಪ್ಪನ ಹತ್ಯೆಯ ವರ್ಣನೆ ಕೇಳುತ್ತಿದ್ದಾಗಲೂ ಸಣ್ಣಗೆ ನಗುತ್ತಲೇ ಇದ್ದ. ಆ ಕುಳ್ಳನೆಯ ಆಕೃತಿ, ಅವನಲ್ಲಿ ನಿರಂತರವಾದ ನಗೆಯುಂಟು ಮಾಡುತ್ತಿತ್ತು.

</p>

</body></text>
</Doc>